

‘ಗೇಟ್ ವೇ ಆರ್ಚ್’ ಮೇಲಿಂದ ಕಾಣುವ ಮೋಹಕ ಸೇಂಟ್ ಲೂಯಿಸ್



ಆರಂಭಿಸಿತು. 20ನೇ ಶತಮಾನದಲ್ಲಿ ಅಮೆರಿಕ ಜಗತ್ತಿನ ಅತ್ಯಂತ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿತಷ್ಟೆ. ಅದಕ್ಕೆ ಪೂರಕವಾದ ಆ ವಿಸ್ತರಣಾ ಕಾರ್ಯಕ್ಕೆ ಸೇಂಟ್ ಲೂಯಿಸ್ ‘ಹೆಬ್ಬಾಗಿಲಾದ’ ವಿಷಯವನ್ನು ನೆನಪಿಸುವ ಸಲುವಾಗಿ, 13 ಮಿಲಿಯನ್ ಡಾಲರ್‌ಗಳ ವೆಚ್ಚದಲ್ಲಿ ಈ ಕಮಾನನ್ನು 1965ರಲ್ಲಿ ನಿರ್ಮಿಸಲಾಯಿತು.

ಸುಮಾರು 63 ಮಹಡಿಗಳಷ್ಟು ಎತ್ತರವಿರುವ ಆ ಭವ್ಯ ಉಕ್ಕಿನ ಕಟ್ಟಡದ ಮೇಲ್ಭಾಗದವರೆಗೂ ವಿಶೇಷ ಸರಣಿಯ ‘ಲಿಫ್ಟ್’ಗಳಲ್ಲಿ ಹೋಗಬಹುದು. ಸಾಮಾನ್ಯವಾಗಿ ಲಿಫ್ಟ್‌ಗಳು ಕಟ್ಟಡಗಳಲ್ಲಿ ನೇರವಾಗಿ ಮೇಲೇರುತ್ತವಷ್ಟೆ. ಆದರೆ ‘ಟ್ರ್ಯಾಮ್ ಕ್ಯಾಪ್ಸೂಲ್’ಗಳೆಂದು ಕರೆಯಲಾಗುವ, ಅತ್ಯಂತ ಇಕ್ಕಟ್ಟಾದ ಈ ಲಿಫ್ಟ್‌ಗಳಲ್ಲಿ 630 ಅಡಿ ಎತ್ತರವನ್ನು ವಕ್ರಪಥದಲ್ಲಿ ನಿಧಾನವಾಗಿ ಏರಿ, ಮತ್ತೆ ಕಡಿದಾದ ಕೆಲವೇ ಮೆಟ್ಟಲುಗಳನ್ನು ಏರಿ, ಮೇಲ್ಭಾಗದಲ್ಲಿನ ಮಟ್ಟಸವಾದ ಪ್ರದೇಶಕ್ಕೆ ತೆರಳಿದಾಗ ಆಗುವ ಅನುಭವ ಅದ್ಭುತ.

ಅಲ್ಲಿನ ಗೋಡೆಗಳಲ್ಲಿನ ಬೃಹತ್ ಗಾಜಿನ ಕಿಟಕಿಗಳ ಮೂಲಕ ಆಚೆ ಕಣ್ಣು ಹಾಯಿಸಿದಾಗ ಒಂದೆಡೆ ನಗರದ ಮಧ್ಯಭಾಗದ ಕಟ್ಟಡಗಳ ಭವ್ಯತೆ ಗೋಚರಿಸಿದರೆ, ಮತ್ತೊಂದೆಡೆ ಗಂಭೀರವಾಗಿ ಹರಿಯುತ್ತಿರುವ ಅಮೆರಿಕದ ಜೀವನದಿ ಮಿಸ್ಸಿಸ್ಸಿಪ್ಪಿ ಹಾಗೂ ಅದರ ಮೇಲೆ ತೇಲುತ್ತಿರುವ ದೈತ್ಯ ಬಾರ್ಜ್‌ಗಳು (ಸರಕನ್ನು ಅಗಾಧ ಪ್ರಮಾಣದಲ್ಲಿ ಸಾಗಿಸುವ ಬೃಹತ್ ಚಪ್ಪಟೆ ದೋಣಿಯಂತಹ ಸಾಧನಗಳು) ಹಾಗೂ ಒಂದು ಬೃಹತ್ ಸೇತುವೆ ಗೋಚರಿಸುತ್ತದೆ.

## ಜೀವನದಿ ಮಿಸ್ಸಿಸ್ಸಿಪ್ಪಿ

ಅಮೆರಿಕದ ಚರಿತ್ರೆಯ, ಆರ್ಥಿಕತೆಯ, ಸಂಸ್ಕೃತಿಯ ಮೇಲೆ ಮಿಸ್ಸಿಸ್ಸಿಪ್ಪಿ ನದಿ ಗಾಢವಾದ ಪ್ರಭಾವವನ್ನು ಬೀರಿದೆ, ಬೀರುತ್ತಿದೆ. ಇಂದಿನ ರಾಕೆಟ್ ಯುಗದಲ್ಲೂ ಅಮೆರಿಕದಿಂದ ರಫ್ತಾಗುವ ಧಾನ್ಯಗಳ ಶೇ. 60 ಭಾಗ ಹಾಗೂ ಪೆಟ್ರೋಲಿಯಂ ಹಾಗೂ ಅನಿಲಗಳ ಶೇ. 22ರಷ್ಟು ಭಾಗ ಈ ನದಿಯ ಮೂಲಕ ಸಾಗುತ್ತದೆ.

ದಿನನಿತ್ಯ ನೂರಾರು ಪ್ರವಾಸಿಗರು ‘ಹೆಬ್ಬಾಗಿಲ ಕಮಾನ’ನ್ನು ಸಂದರ್ಶಿಸುತ್ತಾರೆ. ಇದರ ಕೆಳಗೆ ಇರುವ ಅಂದವಾದ ವಸ್ತುಸಂಗ್ರಹಾಲಯದಲ್ಲಿ ಕೇವಲ ಆ ಕಮಾನು ಹಾಗೂ ಸೇಂಟ್ ಲೂಯಿಸ್ ಅಷ್ಟೇ ಅಲ್ಲ, ಪಶ್ಚಿಮ ದಿಕ್ಕಿನಲ್ಲಿ ಎದುರಾದ ಅನೇಕ ಅಪಾಯಗಳ ನಡುವೆ ಅಮೆರಿಕ ತನ್ನ ವ್ಯಾಪ್ತಿಯನ್ನು ಹಿಗ್ಗಿಸುತ್ತಾ ಹೋದ ಸಾಹಸದ ಚರಿತ್ರೆಯ ಬಗ್ಗೆಯೂ ಮಾಹಿತಿ ದೊರೆಯುತ್ತದೆ.

ನಾವಿಂದು ‘ಅಮೆರಿಕ ಸಂಯುಕ್ತ ಸಂಸ್ಥಾನ’ (ಯು.ಎಸ್.ಎ.) ಎಂದು ಕರೆಯುವ ದೇಶದೊಳಗೆ ಪ್ರಬಲವಾಗಿ ಮೊದಲು ಪ್ರವೇಶಿಸಿ ನೆಲೆಸಿದ ಯೂರೋಪಿಯನ್ನರೆಂದರೆ ಬ್ರಿಟನ್ನಿನ ಜನರು. 17ನೇ ಶತಮಾನದಲ್ಲಿ ಅವರು ಪ್ರವೇಶಿಸಿದ್ದು ಅಮೆರಿಕದ ಈಶಾನ್ಯ (ನಾರ್ತ್ ಈಸ್ಟ್) ಭಾಗವನ್ನು. ಆದರೆ ಯೂರೋಪಿಯನ್ನರು ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸುವುದಕ್ಕೆ ನೂರಾರು ವರ್ಷಗಳ ಹಿಂದೆಯೇ ಅಲ್ಲಿ ‘ರೆಡ್ ಇಂಡಿಯನ್’ ಎಂದು ಯೂರೋಪಿಯನ್ನರು ಒಟ್ಟಾಗಿ (ತಪ್ಪಾಗಿ) ಕರೆದ ಜನಾಂಗಗಳು ವಾಸಿಸುತ್ತಿದ್ದು, ತಮ್ಮದೇ ಆದ ಅನೇಕ ವೈಶಿಷ್ಟ್ಯಗಳನ್ನು ಅವು ಹೊಂದಿದ್ದವು.

## ಮೂಲನಿವಾಸಿಗಳ ಪರಂಪರೆ

ಸೇಂಟ್ ಲೂಯಿಸ್ ಕಮಾನಿನಿಂದ ಕೆಲವೇ ಕಿಲೋಮೀಟರ್ ಸಾಗಿ ಪಕ್ಕದ ಇಲಿನಾಯ್ ರಾಜ್ಯವನ್ನು ಪ್ರವೇಶಿಸಿದರೆ ಅಲ್ಲಿ ‘ಕಹೋಕಿಯ